(ಇಂದು ದಿನಾಂಕಃ 23-01-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ ಶ್ರೀ. ಕೆ.ಆರ್ಃ**

1. ನನ್ನ ಹೆಸರು ನಾಗಲಕ್ಷ್ಮಿ. ನಾನು 10 ನೇ ತರಗತಿಯವರೆ ಶಾಲೆ ಕಲಿತ್ತಿದ್ದು, 10 ನೇಯ ತರಗತಿಯ ಅಂಕಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ದಾವೆಯ ಎಲ್ಲಾ ವಿಷಯಗಳನ್ನು ನಾನು ಮತ್ತು ನನ್ನ ತಂದೆ ಹೇಳಿ ಬರೆಸಿರುತ್ತೇವೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ವಿಷಯಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ನನ್ನ ದಾವೆಯಲ್ಲಿ ಮತ್ತು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನನ್ನ ತಾಯಿಯ ಮದುವೆ ಯಾವ ದಿನಾಂಕ ದಂದು ಎಲ್ಲಿಯಾಯಿತು ಎಂದು ಬರೆಸಿಲ್ಲ. ನನ್ನ ತಂಗಿಯ ಹೆಸರು ಜಾನಕಿ. ಅವಳು ನನ್ನ ತಂಗಿ ನಾವು ಅವಳಿ-ಜವಳಿ ಮಕ್ಕಳಲ್ಲ. ನನ್ನ ವಯಸ್ಸು 34 ಮತ್ತು ನನ್ನ ತಂಗಿಯ ವಯಸ್ಸು 34 ಎಂದು ಬರೆಸಿರುತ್ತೇನೆ ಎಂದರೆ ಸಾಕ್ಷಿ ನನ್ನ ವಯಸ್ಸು 34 ಇದ್ದು ಮತ್ತು ನನ್ನ ತಂಗಿಯೂ ಕೂಡಾ 34 ವರ್ಷ ಇದೆ ಎಂದು ಬರೆಸಿರುತ್ತೇನೆ ಎಂದು ಹೇಳುತ್ತಾರೆ. ನನ್ನ ಹಾಗೂ ನನ್ನ ತಂಗಿಯ ನಡುವೆ ಒಂದು ವರ್ಷ ಅಂತರವಿದೆ. ನಾನು 1984 ರಲ್ಲಿ ಹುಟ್ಟಿರುತ್ತೇನೆ ಎಂದು ನನ್ನ ತಾಯಿ ನನಗೆ ಹೇಳಿದ್ದರು. ನನ್ನ ತಂಗಿ ಯಾವ ವರ್ಷದಲ್ಲಿ ಹುಟ್ಟಿರುತ್ತಾಳೆ ನನಗೆ ಗೊತ್ತಿಲ್ಲ.

2. ಈ ದಾವೆ ಸಲ್ಲಿಸುವ ಮೊದಲು 2003 ರಲ್ಲಿ ಕಲಬುರಗಿಯ ಕೌಟುಂಬಿಕ ನ್ಯಾಯಾಲಯದಲ್ಲಿ ನನ್ನ ತಾಯಿ ಮತ್ತು ಎರಡನೇಯ ವಾದಿ ಜೀವನಾಂಶಕೋರಿ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಆ ಅರ್ಜಿಯಲ್ಲು ಕೂಡಾ ನನ್ನ ತಾಯಿಯ ಮದುವೆ ಯಾವ ದಿನಾಂಕ ದಂದು ಎಲ್ಲಿಯಾಯಿತು ಎಂದು ಬರೆಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆ ಅರ್ಜಿಯಲ್ಲಿ ನನ್ನ ತಾಯಿ ಸಾಯಪ್ಪನ ಹೆಂಡತಿ ಅಲ್ಲ ಮತ್ತು ಎರಡನೇ ವಾದಿ ಸಾಯಪ್ಪನ ಮಗಳಲ್ಲ ಎಂದು ಆದೇಶವಾಗಿದೆ ಎಂದರೆ ಸಾಕ್ಷಿ ನನ್ನತಾಯಿಗೆ ಆರಾಮ

ಇರಲಿಲ್ಲ ಅದಕ್ಕೆ ಆ ಕೇಸ ಏನಾಗಿದೆ ಎಂದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಈ ದಾವೆಯಲ್ಲಿ ಕೌಟುಂಬಿಕ ನ್ಯಾಯಾಲಯದಲ್ಲಿ ನಡೆದ ಅರ್ಜಿಯ ಎಲ್ಲಾ ದಾಖಲೆಗಳನ್ನು ಅಂದರೆ ವಾದ ಪತ್ರ, ಸಾಕ್ಷಿಗಳ ಪ್ರತಿ ಮತ್ತು ಆದೇಶದ ಪ್ರತಿ ಸಲ್ಲಿಸಿರುತ್ತೇನೆ. ಕೌಟುಂಬಿಕ ನ್ಯಾಯಾಲಯದಲ್ಲಿ ನಡೆದ ಅರ್ಜಿಯ ಎಲ್ಲಾ ದಾಖಲೆಗಳನ್ನು ನಾನು ನ್ಯಾಯಾಲಯದಿಂದ ಯಾವಾಗ ಪಡೆದಿರುತ್ತೇನೆ ಎಂದರೆ ಸಾಕ್ಷಿ ಈ ದಾವೆ ಸಲ್ಲಿಸುವ ಮೊದಲು ಪಡೆದಿರುತ್ತೇನೆ ಎಂದು ಹೇಳುತ್ತಾರೆ. ಕೌಟುಂಬಿಕ ನ್ಯಾಯಾಲಯದಲ್ಲಿ ನಡೆದ ಅರ್ಜಿಯ ಏನು ಆದೇಶವಾಯಿತು ಎಂದು ತಿಳಿದುಕೊಂಡ ನಂತರ ಈ ದಾವೆಯನ್ನು ಸಲ್ಲಿಸಿರುತ್ತೇನೆ. ಕೌಟುಂಬಿಕ ನ್ಯಾಯಾಲಯದಲ್ಲಿ ನಡೆದ ಅರ್ಜಿಯ ಅರ್ಜಿಯನ್ನು ಸಲ್ಲಿಸುವಾಗ ನನ್ನ ತಾಯಿ ಹಾಗೂ ಎರಡನೇ ವಾದಿ ನಿಡಗುಂದಾ ಗ್ರಾಮದಲ್ಲಿ ವಾಸವಾಗಿದ್ದರು. ಕೌಟುಂಬಿಕ ನ್ಯಾಯಾಲಯದಲ್ಲಿ ನಡೆದ ಅರ್ಜಿಯ ಅರ್ಜಿಯನ್ನು ಸಲ್ಲಿಸುವಾಗ ನನ್ನ ತಾಯಿ ಹಾಗೂ ಎರಡನೇ ವಾದಿ ನಿಡಗುಂದಾ ಗ್ರಾಮದಲ್ಲಿ ವಾಸವಾಗಿದ್ದರು ಎಂದು ಬರೆದಿರುತ್ತಾರಾ? ಎಂದರೆ ಸಾಕ್ಷಿ ಏನು ಬರೆಸಿರುತ್ತಾರೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಆ ದಾವೆಯಲ್ಲಿ ನನ್ನ ತಂಗಿಯ ವಯಸ್ಸು ಎಷ್ಟು ಎಂದು ಬರೆಸಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಈ ದಾವೆ ಹಾಕುವ ಮೊದಲು ಕೌಟುಂಬಿಕ ನ್ಯಾಯಾಲಯದಲ್ಲಿ ನಡೆದಎಲ್ಲಾ ದಾಖಲೆಗಳನ್ನು ಪಡೆದುಕೊಂಡು ನನ್ನ ವಕೀಲರ ಮೂಲಕ ಓದಿಸಿ ತಿಳಿದುಕೊಂಡಿರುತ್ತೇನೆ. ಆ ಅರ್ಜಿಯಲ್ಲಿ ನನ್ನ ತಂಗಿಯ ವಯಸ್ಸು 16 ವರ್ಷ ಎಂದು ಬರೆದಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ಅರ್ಜಿಯಲ್ಲಿ ನನ್ನ ತಾಯಿ ತಮ್ಮ ಸಾಕ್ಷವನ್ನು ಕೊಟ್ಟಿದ್ದರೊ ಇಲ್ಲಮೊ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಈ ದಾವೆಯ ಮೂಲ ವಾದವಾದ ಪತ್ರವನ್ನು ತೋರಿಸಿದ್ದು, ಸಾಕ್ಷಿ ಅದರಲ್ಲಿರುವ ಸಹಿ ನನ್ನ ತಾಯಿಯ ಸಹಿ ಇದೆ ಎಂದು ಹೇಳುತ್ತಾರೆ. ಮೂರನೇ ವಾದಿ ಈಗ ತೀರಿಕೊಂಡಿರುತ್ತಾರೆ. ನಿ.ಪಿ-10 ಮತ್ತು 11 ರಲ್ಲಿರುವ ಸಹಿಗಳು ನನ್ನ ತಾಯಿಯ ಸಹಿಗಳಾಗಿರುತ್ತವೆ. ಕೌಟುಂಬಿಕ ನ್ಯಾಯಾಲಯದಲ್ಲಿ ನಡೆದ ಅರ್ಜಿಯಲ್ಲಿ ನನ್ನ ತಾಯಿ, ಎರಡನೇ

ವಾದಿ ಶಾಲೆ ಕಲಿತಿಲ್ಲ ಎಂದು ಸಾಕ್ಷಿ ಕೊಟ್ಟಿರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿ ಬದುಕಿರುವಾಗ ಕೌಟುಂಬಿಕ ನ್ಯಾಯಾಲಯದಲ್ಲಿ ನಡೆದ ಅರ್ಜಿಯ ವಜಾ ಆಗಿದೇ ಎಂದು ಅವರಿಗೆ ಗೊತ್ತಿತ್ತು. ಆ ನ್ಯಾಯಾಲಯದಲ್ಲಿ ಆದ ಆದೇಶವನ್ನು ಪ್ರಶ್ನಿಸಿ ನನ್ನ ತಾಯಿ ಯಾವುದೇ ಮೇಲ್ಮನವಿ ಸಲ್ಲಿಸಿಲ್ಲ. ನನ್ನ ತಾಯಿಯ ತಂದೆಯ ಹೆಸರು ಚಂದ್ರಪ್ಪ. ಕೌಟುಂಬಿಕ ನ್ಯಾಯಾಲಯದಲ್ಲಿ ನಡೆದ ಅರ್ಜಿಯಲ್ಲಿ ನನ್ನ ತಾಯಿ ಒಂದು ಪಡಿತರ ಚೀಟಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಪಡಿತರ ಚೀಟಿಯಲ್ಲಿ ನರಸಮ್ಮ ತಂದೆ ಚಂದ್ರಪ್ಪ ಅಂತಾ ಇದ್ದುದ್ದನ್ನು ತೀದ್ದಿ ನರಸಮ್ಮ ಗಂಡ ಸಾಯಪ್ಪ ಎಂದು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನ್ಯಾಯಾಲಯದಲ್ಲಿ ಈ ವಿಷಯ ಗೊತ್ತಾದ ನಂತರ ಮೂಲ ಪಡಿತರ ಚೀಟಿಯನ್ನು ಸಲ್ಲಿಸಲು ಆದೇಶವಾಗಿದ್ದರು ಸಹ ನನ್ನ ತಾಯಿ ಅದನ್ನು ಸಲ್ಲಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆ ನ್ಯಾಯಾಲಯದಲ್ಲಿ ನನ್ನ ತಾಯಿ ಮತ್ತು ನನ್ನ ತಂಗಿ ಸುಳ್ಳು ದಾಖಲೆಗಳನ್ನು ಸಲ್ಲಿಸಿದ್ದರಿಂದ ಆ ದಾವಾ ವಜಾ ಆಯಿತು ಎಂದರೆ ಸಾಕ್ಷಿ ಆ ದಾವೆ ವಜಾ ಆಗಿದೇ ಆದರೆ ಕಾರಣ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಆ ದಾವೆ ಯಾವ ಕಾರಣಕ್ಕಾಗಿ ವಜಾ ಆಗಿದೆ ಎಂದು ನನಗೆ ಗೊತ್ತಿದ್ದರು ಸಹ, ಗೊತ್ತಿಲ್ಲ ಎಂದು ಈ ದಿನ ಸುಳ್ಳ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು).**

ಓ.ಹೇ.ಕೇ. ಸರಿ ಇದೆ

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.